1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 825.

ಮೃತಪಟ್ಟ ಅಚಂಭಟ್ಟರ ಆಸ್ತಿ ವಿಷಯದಲ್ಲಿ.—

ಚಿಕ್ಕಬಳ್ಳಾಪುರದ ತಾಲ್ಲೂಕು ಪೆರಿಸಂದ್ರದಲ್ಲಿ ಯಿರುವ ಅರ್ಜೀದಾರು ಸುಬ್ಬಾವು, ಮೃತಪಟ್ಟ ಸದರೀ ಅಚ್ಚಂಭಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಪೆರಿಸಂದ್ರ ಸ್ಥಳದ ಸುಬ್ಬಾಯರು ಸದರೀ ವಾಸಸ್ಥರಾಗಿ ಮೃತಪಟ್ಟ ಅಚ್ಚಂಭಟ್ಟರ ಜೆಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಾಯರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಚ್ಚಂಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದೇ ಇದರಿಂದ ತಿಳಿಯ ಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರೆ ನವ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್, ಸಬ್, ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 12ನೇ ಜನವರೀ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸೋಣಾದ 2 ರಿಜಿಸ್ಟ್ರಿದ ತಮಸೂಕುಗಳು 1884ನೇ ಇಸವಿ ಲಾಗಾಯಿತು ಬಾಗೇಪಲ್ಲಿ ಸಬ್ ರಿಜಿಸ್ಟರ್ ಆಫಿಸಿನಲ್ಲಿ ಜೀವಾರಸಾಗಿ ನಿಂತು ಯಿರುತ್ತವೆ. ಸದರೀ ತಮಸೂಕುಗಳನ್ನು ರಿಜಿಸ್ಟರಿಗೆ ಹಾಜರ್‌ಮಾಡಿದವರಾಗಲಿ, ಅದರಲ್ಲಿ ಬಾಧ್ಯತೆವುಳ್ಳವರಾಗಲಿ, ಈ ಲಾಗಾಯಿತು 1 ತಿಂಗಳಲ್ಲಿ ಬಾಗೇಪಲ್ಲಿ ಸಬ್ ರಿಜಿಸ್ಟ್ರಾರರ್ಲಿ ಹಾಜರಾಗಿ ವಾಜಬಿ ಫೀಜು ಪಾವತಿಯಿಂದ ತಂಸೂಕುಗಳನ್ನು ವಾಪಸ್ ಪಡಿಯಬಹುದು ಇಲ್ಲವಾದರೆ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅನುಗಳು ನಾಶ ಪಡಿಸಲ್ಪಡುವವು.

ಆಫೀಸಿನ ಹೆಸರು.	ರಿಜಿಸ್ಟರ್ ಬುಕ್ಕಿನ ಮತ್ತು ತಂಸೂಕಿನ ನಂಬರು ಇಸವಿ.	ಕಕ್ಷಿಗಾರ್ರ ಹೆಸರು.		ತಂಸೂಕಿನ ತಾರೀಖು.	ತಂಸೂಕು ರಿಜಿಸ್ಟ್ರಾದ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಂಮತು.
		ತಂಸೂಕುಬರದು ಕೊಟ್ಟವ.	ಬರಸಿಕೊಂಡವ.			
ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸ್.	1ನೇ ಬುಕ್ಕಿನ 1883—84ನೇ ಇಸವಿ ನಂಬರು 27	ಬಾಗೇಪಲ್ಲಿ ತಾಲ್ಲೂಕು ಬೀಳೂರು ಹೋಬಳಿ ರಾಚ್ಚರುವು ಗ್ರಾಮದ ವಾಸಸ್ತ ಪಟೇಲಹೆಬ್ಬಾರರಾಮಪ್ಪನ ಮಗ ಸುಬ್ಬರಾಮಪ್ಪ	ಕಡಪಾಜಿಲ್ಲಾ ಕದಿರಿ ತಾಲ್ಲೂಕು ಈ ತೋಟಿ ಗ್ರಾಮದ ಕೋವುಟಿ ಕರೇರಂಗಪ್ಪನ ಮಗ ಬಾಲಯ್ಯ	1884ನೇ ಇಸವಿ ಫಿಬ್ರವರೀ ತಾರೀಖು 6	1884ನೇ ಇಸವಿ ಫಿಬ್ರವರೀ ತಾರೀಖು 6	ಬಾಗೇಪಲ್ಲಿ ತಾಲ್ಲೂಕು ಸೋವಕಪಲ್ಲಿ ಕೊಂಡೋರುಪಲ್ಲಿ ಈಗ್ರಾಮಗಳ ಬಾಬತು ತರೀಖುಪಿಷ್ಕ್ರೀ—ಬಾಗಾಯಿತು ಬೀಜವರೀ ೨೫೦೦ ಕಂದಾಯ ೪೪೦೦ ವುಳ್ಳ ಜಮೀನುಗಳು 300 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.
	ಡಿಟೋ ಇಸವಿ ನಂಬರ್ 28	ಡಿಟೋ	ಡಿಟೋ	ಡಿಟೋ	ಡಿಟೋ	ಬಾಗೇಪಲ್ಲಿ ತಾಲ್ಲೂಕು ರಾಚ್ಚರುವು ಮುಸಿಲಿಗನಪಲ್ಲಿ ಈ ಗ್ರಾಮಗಳ ಬಿಳಿಯಿರುವ ತರೀಖುಪಿಷ್ಕ್ರೀ-ಬಾಗಾಯಿತು ಬೀಜವರೀ ೯೫೦-೩೦೦ಗೆ ಕಂದಾಯ 94-3-0 ವುಳ್ಳ ಜಮೀನುಗಳನ್ನ 740 ರೂಪಾಯಿಗಳಿಗೆ ಆಧಾರಮಾಡಿ ಇರುವದಾಗಿ.

ಸಿ. ಸುಬ್ಬರಾವ್, ರಿಜಿಸ್ಟ್ರಾರ್.